ಅಸಲು ದಾವೆ ನಂಃ 233/2021 ಪಿ.ಡಬ್ಲ್ಯೂಃ1- ಫಕೀರಪ್ಪ ಸಜ್ಜನರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 24-05-2023 ರಂದು ಪ್ರಮಾಣೀಕರಿಸಲಾಯಿತು.

**ಪಾಟೀಸ ವಾಲುಃ- ಪ್ರತಿವಾದಿಗಳ ಪರ ಶ್ರೀ.ಬ.ಅ. ಸಜ್ಜನರ ವಕೀಲರಿಂದಃ**

1. ಈ ದಾವೆಯನ್ನು ನಾನು ಮತ್ತು ನನ್ನ ಸಹೋದರರಾದ ಅಶೋಕ ಮತ್ತು ಬಸಪ್ಪ ಸೇರಿ ಮಾಡಿದ್ದೇವೆ. ದಾವೆ ಹಾಕಲು ವಕೀಲರಿಗೆ ಮಾಹಿತಿಯನ್ನು ನಾನು ನೀಡಿದ್ದೇನೆ. ನಾನು ಪಿ ಯುಸಿ ಸೆಂಕೆಂಡ್ ಈಯರ್ ವರೆಗೂ ವಿಧ್ಯಾಭ್ಯಾಸ ಮಾಡಿದ್ದೇನೆ. ಸರ್ವೇ ನಂಬರ 453 ರಲ್ಲಿರವ ಎಲ್ಲಾ ಜಮೀನುಗಳನ್ನು ನಾನು ನೋಡಿದ್ದೇನೆ. ಪ್ರತಿವಾದಿ ನಂದಪ್ಪನ ತಂದೆಯ ಹೆಸರು ಕರಿಬಸಪ್ಪ ಎಂದರೆ ನಿಜ. ನಾನು ರಾಮದುರ್ಗದಲ್ಲಿ ಕಿರಾಣಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತೇನೆ. ಕರಿಬಸಪ್ಪನಿಗೆ 4 ಜನ ಗಂಡು ಮಕ್ಕಳು ಎಂದರೆ ನಿಜ. ಅವರುಗಳ ಹೆಸರು 1) ಶಿವಪ್ಪ, 2) ಈರಪ್ಪ , 3) ಬಸಪ್ಪ ಮತ್ತು 4) ನಂದಪ್ಪ ಎಂದರೆ ನಿಜ. ಇವರುಗಳ ಮಧ್ಯದಲ್ಲಿ ಸುಮಾರು 35 ವರ್ಷಗಳ ಹಿಂದೆಯೇ ಪಾಲುವಾಟ್ನಿ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೇ ನಂ.453 ರಲ್ಲಿ ಈಗ ಪೋಡ್ ಆಗಿ, 453/1 ಅ, 453/1ಬ , 453/1ಕ ಮತ್ತು 453/1ಡ ಎಂದು ಆಗಿದೆ ಎಂದರೆ ನಿಜ. ಸರ್ವೇ ನಂ.453/1ಬ ಇದು ಕ್ಷೇತ್ರ 1 ಎ-4 ಗುಂಟೆ ಜಮೀನು ಮೊದಲನೆ ಮಗ ಶಿವಪ್ಪನ ಪಾಲಿಗೆ ಬಂದಿದ್ದು, ಅದನ್ನು ಆತ ತನ್ನ ತಮ್ಮ ಈರಪ್ಪನಿಗೆ ಮಾರಾಟ ಮಾಡಿ, ಮೃತ ಆಗಿದ್ದಾರೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಈರಪ್ಪನಿಗೆ ಈಗ 2 ಎ- 8 ಗು ಜಮೀನು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯ

ಜಮೀನು ಪೂರ್ವ ಪಶ್ಚಿಮವಾಗಿ ಇರುತ್ತದೆ. ಅವರ ಅಣ್ಣ ತಮ್ಮಂದಿರು ಪೂರ್ವ ಪಶ್ಚಿಮವಾಗಿ ಹಂಚಿಕೊಂಡಿದ್ದಾರೆ ಎಂದರೆ ನಿಜ. ಸರ್ವೇ ನಂ. 453 ರಲ್ಲಿ ಉತ್ತರ ದಿಕ್ಕಿಗೆ ಕುಸುಗಲ್ಲ ಶೇಖವ್ವ ಕೋಂ ಚೆನ್ನಬಸಪ್ಪ ಇವರ ಹೆಸರಿಗೆ 4 ಎ- 33 ಗು ಜಮೀನು ಇದೆ ಎಂದರೆ ನಿಜ. ಕುಸುಗಲ್ಲ ಶೇಖವ್ವ ಇವರ ಜಮೀನಿಗೆ ಹೊಂದಿಕೊಂಡು ದಕ್ಷಿಣಕ್ಕೆ ಶಿವಪ್ಪ ತಂದೆ ಕರಬಸಪ್ಪ ಹಕ್ಕಾಪಕ್ಕಿ ಇವರ ಸರ್ವೇ ನಂ.453/1ಬ ಕ್ಷೇತ್ರ 2ಎ - 8ಗು ಜಮೀನು ಇದೆ ಎಂದರೆ ನಿಜ. ಸರ್ವೇ ನಂ. 453/1ಬ ಜಮೀನಿಗೆ ಹೊಂದಿಕೊಂಡು ದಕ್ಷಿಣಕ್ಕೆ ಪ್ರತಿವಾದಿ ನಂದಪ್ಪ ಕರಬಸಪ್ಪ ಹಕ್ಕಾಪಕ್ಕಿ ಇವರ ಸರ್ವೇ ನಂ.453/1ಕ ಜಮೀನು ಕ್ಷೇತ್ರ 1ಎ-8 ಗು ಇದೆ ಎಂದರೆ ನಿಜ. ಸರ್ವೇ ನಂ.453/1ಕ ಜಮೀನಿಗೆ ಹೊಂದಿಕೊಂಡು ದಕ್ಷಿಣಕ್ಕೆ ಬಸಪ್ಪ ತಂದೆ ಕರಬಸಪ್ಪ ಹಕ್ಕಾಪಕ್ಕಿ ಇವರ ಸರ್ವೇ ನಂ.453/1ಡ ಜಮೀನು ಕ್ಷೇತ್ರ 1ಎ-4 ಗು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೇ ನಂ.453 ರಲ್ಲಿ ಸರ್ವೇ ನಂ.453/1ಡ ಬಸಪ್ಪ ಇವರ ಜಮೀನು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ನಾವುಗಳು ಸರ್ವೇ ನಂ. 454 ರಲ್ಲಿ ಹಾದು ಸರ್ವೇ ನಂ. 453/1ಬ ಜಮೀನಿನ ಬದುವಿನಗುಂಟ ಪೂರ್ವಕ್ಕೆ ಹೋಗಿ, ನಮ್ಮ ಜಮೀನು ಆದ ಸರ್ವೇ ನಂ.448 ಕ್ಕೆ ಹೋಗುತ್ತೇವೆ. ಸರ್ವೇ ನಂ.453/1ಬ ಕ್ಷೇತ್ರ 2ಎ-8 ಗು ಇದರ ಜಮೀನಿನ ಮಾಲೀಕರು ಶಿವಪ್ಪ ತಂದೆ ಕರಬಸಪ್ಪ ಹಕ್ಕಾಪಕ್ಕಿ ಎಂದರೆ ನಿಜ. ಪ್ರತಿವಾದಿಯ ಪ್ರಕಾರ ನಾವು 453/1ಕ ಜಮೀನಿನಲ್ಲಿ ಓಡಾಡಿಲ್ಲ ಎಂದರೆ ಸಾಕ್ಷಿ ನನಗೆ ಅ,ಬ , ಕ ,ಡ

ಈ ಜಮೀನುಗಳ ಬಗ್ಗೆ confuse ಇದೆ ಎಂದು ಹೇಳುತ್ತಾರೆ. ಈಗ ನಾನು ನನ್ನ ವಾದ ಪತ್ರದ ಹಾತನಕಾಶೆ ನೋಡುತ್ತಿದ್ದೇನೆ. ಅದರಲ್ಲಿ ಪ್ರತಿವಾದಿಯ ಜಮೀನನ್ನು ಉತ್ತರ ದಕ್ಷಿಣವಾಗಿ ಭಾಗ ಮಾಡಿ ತೋರಿಸಿದ್ದೇನೆಂದರೆ ನಿಜ. ಪ್ರತಿವಾದಿಯ ಜಮೀನನ್ನು 453/1 ಸಿ ಎಂದು ತೋರಿಸಿದ್ದು, ಅದು ಪಶ್ಚಿಮ ದಿಕ್ಕಿಗೆ ತೋರಿಸಿದ್ದೇನೆಂದರೆ ನಿಜ. ಈ ದಾವಾ ಮಾಡುವ ಮುಂಚೆ ನಾನು ಪೀಟಿ ಶೀಟ ಮತ್ತು ಗ್ರಾಮ ನಕ್ಷೆ ತೆಗೆಯಿಸಿ ನೋಡಿದ್ದೇನೆ.

**ಮುಂದುವರೆದ ಪಾಟೀ ಸವಾಲುಃ-ಕೋರಿಕೆಯ ಮೇರೆಗೆ ಮೂಂದುಾಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**